# ‘ಸಿನಿಮಾ ಆನ್ಸೋದು ಅಡುಗೆ ಇದ್ದ ಹಾಗೆ’



■ ಸಂದರ್ಶನ: ಪದ್ಮನಾಭ ಭಟ್

◆ **ಸದ್ಯಕ್ಕೆ ಯಾವ ಸಿನಿಮಾಗಳಲ್ಲಿ ನಟಿಸುತ್ತಿದ್ದೀರಿ?**

‘ತುರ್ತು ನಿರ್ಗಮನ’ ಇನ್ನೂ ಬಿಡುಗಡೆಯಾಗಬೇಕಿದೆ. ನಟೇಶ ಹೆಗಡೆ ಅವರ ‘ಪೆದ್ರೊ’ ಸಿನಿಮಾದಲ್ಲಿ ನಟಿಸಿದ್ದೇನೆ. ಉಳಿದಂತೆ, ಯಾವ ಹೊಸ ಸಿನಿಮಾವನ್ನೂ ಒಪ್ಪಿಕೊಂಡಿಲ್ಲ.

◆ **ನಿಮ್ಮ ಎರಡನೇ ಸಿನಿಮಾ ‘ಗರುಡ ಗಮನ; ವೃಷಭ ವಾಹನ’ ಯಾವ ಹಂತದಲ್ಲಿದೆ?**

ಚಿತ್ರೀಕರಣ ಮುಗಿದು, ಸಂಕಲನವೂ ನಡೆಯುತ್ತಿದೆ. ಸಂಗೀತದ ಕೆಲಸ ನಡೆಯುತ್ತಿದೆ.

◆ **ಸಿನಿಮಾ ಹೆಸರು ವಿಚಿತ್ರವಾಗಿದೆ. ಫಸ್ಟ್ ಲುಕ್, ಸೆಕೆಂಡ್ ಲುಕ್ ಎಲ್ಲವೂ ಅಷ್ಟೇ ವಿಚಿತ್ರವಾಗಿದ್ದವು. ಇದು ಯಾವ ರೀತಿಯ ಸಿನಿಮಾ?**

ಇದೊಂದು ಗ್ಯಾಂಗ್‌ಸ್ಟರ್ ಸಿನಿಮಾ. ಮಂಗಳೂರಿನ ರೌಡಿಸಂ ಬಗ್ಗೆ ಇರುವ ಸಿನಿಮಾ. ಫಸ್ಟ್ ಲುಕ್‌ನಲ್ಲಿ ಎರಡು ಪಾತ್ರಗಳನ್ನು ಪರಿಚಯಿಸುತ್ತಿದ್ದೇವೆ. ‘ಗರುಡ ಗಮನ; ವೃಷಭ ವಾಹನ’ ಎಂದರೆ ಅದು ಎರಡು ತತ್ತ್ವಗಳನ್ನು ಹೇಳುತ್ತದೆ. ಗರುಡ ಗಮನ ಎಂದರೆ ವಿಷ್ಣು. ವೃಷಭ ವಾಹನ ಎಂದರೆ ಶಿವ. ಒಂದು ನಿರ್ವಹಣೆಯ ತತ್ತ್ವ ಸೂಚಿಸಿದರೆ, ಇನ್ನೊಂದು ಲಯತತ್ತ್ವವನ್ನು ಅಂದರೆ ನಾಶವನ್ನು ಪ್ರತೀಕಿಸುತ್ತದೆ. ಇಬ್ಬರೂ ರೌಡಿಗಳೂ ಅದೇ ತತ್ತ್ವದಲ್ಲಿ ಇದ್ದರೆ, ಅವರ ನಡುವಿನ ಘರ್ಷಣೆ ಹೇಗಿರಬಹುದು? ಏನಾಗಬಹುದು ಎಂಬುದು ಸಿನಿಮಾ ಕಥೆ.

◆ **ನಿಮ್ಮ ಮೊದಲನೇ ಸಿನಿಮಾ ‘ಒಂದು ಮೊಟ್ಟೆಯ ಕಥೆ’ ಪೂರ್ತಿಯಾಗಿ ಕಾಮಿಡಿ ಸಿನಿಮಾ. ಈಗ ಗ್ಯಾಂಗ್‌ಸ್ಟರ್ ಕಥೆಗೆ ಜಂಪ್ ಆಗಿದ್ದೀರಿ. ಹೊಸ ಪ್ರಕಾರದಲ್ಲಿ ಕಥೆ ಹೇಳುವಾಗ ನೀವು ಎದುರಿಸಿದ ಸವಾಲುಗಳೇನು?**

ನಾನು ಆ ಚಾಲೆಂಜ್ ಎದುರಿಸಬೇಕಾಗುತ್ತದೆ ಎಂಬ ಕಾರಣಕ್ಕಾಗಿಯೇ ಈ ಸಿನಿಮಾವನ್ನು ಇಷ್ಟಪಟ್ಟು ಮಾಡುತ್ತಿರುವುದು. ‘ಒಂದು ಮೊಟ್ಟೆಯ ಕಥೆ’ ಸಿನಿಮಾ ನಮ್ಮ ಮಿತಿಗಳ ನಡುವೆಯೇ ಮಾಡಿದ ಸಿನಿಮಾ. ನಮ್ಮತ್ರ ಇರುವ ಬಜೆಟ್, ನಟರು ಎಂಥವರು, ನಮ್ಮ ಸಂಪನ್ಮೂಲಗಳೇನು ಎಂಬುದನ್ನೆಲ್ಲ ಯೋಚಿಸಿ ಆ ಮಿತಿಗೆ ಹೊಂದುವ ಹಾಗೆಯೇ ಬರೆದ ಸಿನಿಮಾ. ‘ಗರುಡ ಗಮನ; ವೃಷಭ ವಾಹನ’ ಕೂಡ ನಮ್ಮ ಮಿತಿಗಳನ್ನು ತಲೆಯಲ್ಲಿಟ್ಟುಕೊಂಡೇ ಬರೆದ, ಆದರೆ ಆ ಮಿತಿಗಳನ್ನು ಮೀರಲೇಬೇಕು ಎಂದುಕೊಂಡೇ ಮಾಡಿದ ಸಿನಿಮಾ. ಎರಡೂ ಸಿನಿಮಾಗಳನ್ನು ಮಾಡುವಾಗಲೂ ಲಿಮಿಟೇಷನ್ಸ್ ಇದ್ದವು. ಒಂದು ಸಿನಿಮಾ ಲಿಮಿಟೇಷನ್‌ಗಳನ್ನು ದಾಟಲಾರದೇ ಬರೆದ ಸಿನಿಮಾ. ಇನ್ನೊಂದು ಲಿಮಿಟೇಷನ್‌ಗಳನ್ನು ದಾಟಲೇಬೇಕು ಎಂದು ಬರೆದ ಸಿನಿಮಾ.

ಒಂದು ಮೊಟ್ಟೆಯ ಕಥೆ ಹೇಗೆ ಬಹಳಷ್ಟನ್ನು ಕಲಿಸಿದೆಯೋ, ಈ ಸಿನಿಮಾವೂ ನಮಗೆ ಸಾಕಷ್ಟು ಕಲಿಸಿದೆ. ಒಂದು ಮೊಟ್ಟೆಯ ಕಥೆ ಎಷ್ಟು ಒಳಾಂಗಣದಲ್ಲಿ ಚಿತ್ರೀಕರಣ ಮಾಡಿದೆವೋ, ಇದನ್ನು ಅಷ್ಟೇ ಹೊರಾಂಗಣದಲ್ಲಿ ಚಿತ್ರೀಕರಿಸಿದ್ದೇವೆ. ಒಂದು ಮೊಟ್ಟೆಯ ಕಥೆ, ಮಂಗಳೂರಿನ ಒಂದು ಭಾಗವನ್ನು, ಒಬ್ಬ ವ್ಯಕ್ತಿಯನ್ನು ಮತ್ತು ಅವನ ಅಂತರಂಗವನ್ನು ತೋರಿಸುತ್ತದೆ. ಈ ಸಿನಿಮಾದಲ್ಲಿ ಇಬ್ಬರು ಇದ್ದಾರೆ. ಜೊತೆಗೆ ಇಡೀ ಮಂಗಳೂರೇ ಒಂದು ಪಾತ್ರವಾಗಿರುತ್ತದೆ.

◆ **ಸಿನಿಮಾ ನಿರ್ಮಿತಿಯ ಪ್ರಕ್ರಿಯೆಯಲ್ಲಿ ಯಾವ ಹಂತ ನಿಮಗೆ ತುಂಬ ಮುಖ್ಯವಾದದ್ದು ಅನಿಸುತ್ತದೆ?**

ಯಾವತ್ತಿಗೂ ಸ್ಕ್ರಿಪ್ಟ್ ತುಂಬ ಮುಖ್ಯ. ನಾನು ಯಾವತ್ತೂ ಸಿನಿಮಾವನ್ನು ಅಡುಗೆಗೆ